ಹೊಟ್ಟೆ ತುಂಬಿದ ಮ್ಯಾಲೂ ಉಣಕ, ನಿದ್ದೆ ತಿಳಿದೆದ್ದ ಮ್ಯಾಲೂ ಮಕ್ಕಂಬಾಕ, ನಿದ್ದೆ ಬಂದಾಗಲೂ ಎಚ್ಚರಾಗಿರಾಕ ಯಾಕ ಆಗದಿಲ್ಲ ನಮಗ? ಇಂದ್ರಿಯ ನಿಗ್ರಹ ಅಂಬದುಗೂಡ ಒಂದು ಅಹಂಕಾರನೇ. ನಾನು, ನನ್ನಿಂದ ಅಂಬದೆಲ್ಲ ಭ್ರಮೆ. ನಾನು ಹುಟ್ಟಾ ಮೊದಲೂ ಈ ಜಗತ್ತಿತ್ತು, ನಾ ಸತ್ತ ಮ್ಯಾಲೂ ಈ ಜಗತ್ತು ಇರುತಾದ. ಇಷ್ಟೇ. ನಾನು ಅಂಬದು ಒಂದು ನಿಮಿತ್ಯ, ಅಷ್ಟೇ" ಅಂದ.

ನನ್ನೊಳಗೂ 'ನಾನು' ಎಂಬುದು ಬಹಳೇ ತುಂಬಿಕೆಂಡಿತ್ತು.

ಹತ್ತನೇತ್ತರಾಗ ಗಣಿತದಲ್ಲಿ ನೂರಕ್ಕೆ ತೊಂಬತ್ತೊಂದು ತಗಂಡು ಸೆಂಟರಿಗೆ ಫಸ್ಟ್ ಬಂದೋನು ನಾನು... ಈಗ ಸಾಹಿತ್ಯ ಮಣ್ಣು ಮಸಿ ಅಂತ ಇಲ್ಲದ್ದು ಹಚ್ಚಿಗೆಂಡು ಫೇಲಾಗೀನಿ. ಒಂದು ತಿಂಗಳು ಪಟ್ಟಾಗಿ ಕುಂತು ಓದಿದ್ರೆ ಅದನ್ನು ಕ್ಲಿಯರ್ ಮಾಡೋದು ಅಂಥ ದೊಡ್ಡ ಸಮಸ್ಯೆನೇ ಅಲ್ಲ. ಆದರೂ ನನ್ನ ಅಹಂಕಾರಕ್ಕೆ ತಾತನ ಮಾತಿನಿಂದ ಪೆಟ್ಟು ಬಿದ್ದಂತಾಗಿ ಅದು ಅರಪೆಟ್ಟು ತಿಂದ ಹಾವಿನಂತೆ ಬುಸುಗುಡತೊಡಗಿತು. ನಾನು ಸೋತಿದ್ದು ನನಗೇ ಫೀಲ್ ಆಗ್ತಾ ಇತ್ತು. ಅದನ್ನು ಹೊರಗೆ ತೋರಗೊಡದೆ, "ಇಂಥವೆಲ್ಲ ನಾನು ಒಪ್ಪದಿಲ್ಲ" ಅನ್ನುತ್ತ ಎದ್ದು ಹೊರನಡೆದುಬಿಟ್ಟಿದ್ದೆ.

...ನೆನಪುಗಳನ್ನೆಲ್ಲ ಒಮ್ಮೆ ತಲೆ ಜಾಡಿಸಿ ಕೊಡವಿಕೊಂಡೆ.

ಈ ಮನುಷ್ಯನನ್ನು ಮಾತಿನಲ್ಲಂತೂ ಗೆಲ್ಲೋಕಾಗಲ್ಲ. ಆದರೆ, ನನ್ನ ಬದುಕಿನ ಮುಂದಿನ ಕ್ಷಣದ ಬಗ್ಗೆ ಭವಿಷ್ಯ ನುಡಿದು ಈಗ ತಾನೇ ಹಗ್ಗ ಕೊಟ್ಟು ಕೈಕಟ್ಟಿಸಿಕೊಂಡಿದ್ದಾನೆ. ಇದು ಸುಳ್ಳು ಅಂತ ಪ್ರೂವ್ ಮಾಡಿದರೆ ನಾನು ಗೆದ್ದಂತೆ. ನನ್ನ ಅಕ್ಷರ ಗೆದ್ದಂತೆ. ಈ ಅವಕಾಶವನ್ನು ಸುಲಭದಲ್ಲಿ ಕೈಜಾರಿ ಹೋಗಲು ಬಿಡಬಾರದು. ಮನಸ್ಸು ಈ ಯೋಜನೆಯ ಅನುಷ್ಠಾನಕ್ಕಾಗಿ ಕಾರ್ಯತಂತ್ರವನ್ನು ಹೆಣೆಯತೊಡಗಿತು.

ಇವತ್ತು ರಾತ್ರಿಯ ಊಟವನ್ನೇ ಮಾಡದಿದ್ದರಾಯಿತಲ್ಲ. ಇಷ್ಟು ಸುಲಭವಿದೆ ನನ್ನ ಗೆಲುವು. ಆದರೆ, ಅದನ್ನೂ ಸುಲಭವೆಂದು ಭಾವಿಸುವಂತಿಲ್ಲ. ರಾತ್ರಿ ಅಮ್ಮ ಹುಗ್ಗಿ ಮಾಡದಂತೆ ನೋಡಿಕೊಳ್ಳಬಹುದು. ಮಾಡಿದರೆ ಉಣ್ಣದೆ ತಪ್ಪಿಸಿಕೊಳ್ಳಬಹುದು. ಆದರೆ, ನನ್ನೆಲ್ಲ ಎಣಿಕೆ ಮೀರಿ ಯಾರಾದರೂ ಊಟಕ್ಕೆ ಕರೆದರೆ... ನಾನಿರುವಾಗ ಅಪ್ಪ ಅಮ್ಮನಂತೂ ಹೋಗುವವರಲ್ಲ. ಅಲ್ಲಿ ಅವರು ಹುಗ್ಗಿಯನ್ನೇ ಮಾಡಿದ್ದರೆ? ಭಿಡೆಕ್ಕ ಬಸುರಾಗಿ ಹಡ್ಯಾಕಾಗ್ಲಾರ್ದ ಸತ್ತು ಅನ್ನಂಗಾಗುತ್ತ ಪರಿಸ್ಥಿತಿ.

ರಾಮಕೃಷ್ಣನ ಮನೆಗೆ ಹೋಗ್ತೀನಿ ಅಂತ ಹೇಳಿಯಾಗಿದೆ. ಹೋಗೇಬಿಡೋಣ. ಅಥವಾ ಅಣ್ಣಾರಾವ್ ಮನೆಗೆ? ಬೆಳಗ್ಗೆ ಪರೀಕ್ಷೆಯಿಟ್ಟುಕೊಂಡೂ ರಾತ್ರಿ ಮೂರು ಗಂಟೆವರೆಗೆ ಮಾತಾಡ್ತಾ ಕೂತವರು ನಾವು. ನಾನು ಉಂಡು ಬಂದಿದ್ದೀನೆಂದರೂ ಇವರಿಬ್ಬರ ಮನೆಯಲ್ಲಿ ಸ್ವಲ್ಪವಾದರೂ ಮತ್ತೆ ಕೈತೊಳೆಯಲೇಬೇಕಾಗುವುದು. ನನ್ನ ದುರದೃಷ್ಟಕ್ಕೆ ಅಲ್ಲೇನಾದರೂ ಹುಗ್ಗಿಯೇ ಇದ್ದರೆ? ಬೇಡ.

ಎಲ್ಲ ಯೋಚಿಸಿದ ಮೇಲೆ ಮಾಮನವರ ಮಾವಿನ ತೋಟಕ್ಕೆ ಹೋಗೋದು ಒಳ್ಳೆಯದು ಅನ್ನಿಸಿತು. ಒಂದು ಕಾಲಕ್ಕದು ಮಾವಿನ ತೋಟ. ಅಣ್ಣ ತಮ್ಮಂದಿರ ಆಕ್ರೋಶ, ಹಟ, ಜಿದ್ದಾಜಿದ್ದಿಗೆ ಬಲಿಯಾಗಿ ಈಗ ಒಂದೇ ಗಿಡ ಉಳಿದಿತ್ತು. ಗಿಡದ ಕೆಳಗೆ ತಾತ–ಅವ್ವಂದಿರ ಸಮಾಧಿ ಕಟ್ಟೆಗಳು ಒಂದಕ್ಕೊಂದು ಅಂಟಿಕೊಂಡಿದ್ದರಿಂದಾಗಿ ಅವೆರಡೂ ಸೇರಿ ಒಂದು ಮಂಚದಷ್ಟಗಲದ ಕಟ್ಟೆಯಾಗಿತ್ತು. ಕೂಗಳತೆ ದೂರದಲ್ಲಿ ಕೆರೆ. ಸುಪರಿಚಿತ ದಾರಿ. ಊರಿಗೆ ಹತ್ತಿರ. ಜನರಿಂದ ದೂರ. ಅದೇ ಸರಿ ಎಂದು ತೀರ್ಮಾನಿಸಿದೆ. ಇಷ್ಟೊಂದು ಗೊಂದಲ, ಚರ್ಚೆಗಳು ಮನಸಲ್ಲೇ ನಡೆದು ತಾರ್ಕಿಕ ಕೊನೆ ತಲುಪುವ ಹೊತ್ತಿಗೆ ಮುಸ್ಸಂಜೆ ಮುಗಿದು ಕತ್ತಲಾವರಿಸತೊಡಗಿತ್ತು.

ನನ್ನ ಕಾಲುಗಳ ಕಣ್ಣಿಗೆ ಕಾಣುತ್ತಿದ್ದುದು ಹೊಲದ ಮಾವಿನ ಮರವೊಂದೇ.

ಊರು ದಾಟುತ್ತಿದ್ದಂತೆ ಹಾಯೆನಿಸುವ ಗಾಳಿ. ಆಹ್ಲಾದಕರ ವಾತಾವರಣ. ಮೈಮನಸ್ಸುಗಳು